ತಾರೀಖು 19ನೇ ಜುಲೈ 1876.

ಮೆ॥ ಕಲ್ಯಾಣಸುಂದರಂಕೆಟ್ಟಿಯವರು 1876ನೇ ಜುಲೈ 18ನೇ ಮರ್ತುಂನಲ್ಲಿ ಬೆಂಗಳೂರು ತಲಪಿದಂತೆ ರಿಪೋರ್ಟು ಮಾಡಿದರು. ಮತ್ತು ಚೀಪ್‌ಕಮ್ಮಿಷನರವರ ಕಚ್ಚೇರಿಯಲ್ಲಿ ಕೆಲಸ ನೋಡತಕ್ಕದ್ದು.

"ಬವೋಜೀಬ್ ಹುಕ್ಕುಂ,"

T. CLARKE,
Offg. Secretary.

ಪಬ್ಲಿಕ್ ವರ್ಕ್ಸ್ ಇಲಾ

ನಂ. 22. ತಾರೀಖು 17ನೇ ಜುಲೈ 76.

ಅಸಿಸ್ಟೆಂಟ್ ಇಂಜಿನಿಯರ್ ವ 4ನೇ ಗ್ರೇಡ್ ಹಂಗಾಮಿ ಯಗ್ಜಿ ಇಂಜಿನಿಯರ್ ಮತ್ತು ಬೆಂಗಳೂರು ಇಂಜಿನಿಯರಿಂಗ್ ವ ನ್ಯಾಚುರಲ್ ಸೈನ್ಸ್ ಸ್ಕೂಲಿನ ಪ್ರಿನ್ಸಿಪಲ್ ಮೆಸ್ಟರ್ ಗ್ರಮ್ಮಾ ರು, 1875ನೇ ಇಸವಿ ಮಾರ್ಚಿ 16ನೇ ಮರ್ತುಂ 438ನೇ ನಂಬರ್ ಬಾಬತು ಇಂಡ್ಯಗವರ್ಮೆಂಟಿನವರ ಲೆಟರಿನ ಪ್ರಕಟ ಹುಕ್ಕುಂ ಅನುಸಾರವಾಗಿ, ಮೇಜರ್ ಕ್ರಿಸ್ಟಿಯವರು ಸೂಪರ್‌ಟೆಂಡಿಂಗ್ ಇಂಜನಿಯರ್ ಕೆಲಸಕ್ಕೆ ಬಡ್ತೀಹೊಂದಿದ ಂದರೆ, 1875ನೇ ಇಸವಿ ಅಕ್ಟೋಬರ್ 29ನೇ ಮರ್ತುಂ ಲಾಗಾಯಿತು 4ನೇ ಗ್ರೇಡ್ ಯಗ್ಜಿಕ್ಯೂಟಿವ್ ಇಂಜನಿಯರ್ ಗೆ ಯಂ ಆಗಿ ಬಡ್ತೀವಮಾಡಲ್ಪಟ್ಟಿರುತ್ತಾರೆ.

"ಬವೋಜೀಬ್ ಹುಕ್ಕುಂ,"

W. R. JOHNSON, *Lieut.-Col.*,
Offg. Secy., P. W. D.

ಕೊಡಗು ಚೀಪ್ ಕಮ್ಮಿ ರಿಂದ ಕ್ಯಾ ೋಣಾದ ಇಸ್ತಿಹಾರ್ ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ನಂ. 3. ತಾರೀಖು 7ನೇ ಜುಲೈ 1876.

ವೀರರಾಜೇಂದ್ರಪೇಟೆ ಮ್ಯುನಿಸಿಪ್ಯಾಲಿಟಿಗೋಸ್ಕರ ಇದರಡಿ ಬರುವ ಬೈಲು ನಿಬಂಧನೆಗಳು ಚೀಫ್ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಟ್ಟಿವೆಯಾಗಿ ಸಕಲರಿಗೂ ತಿಳಿಯತಕ್ಕ ಬಗ್ಗೆ ಘಾಯಿಷ್ ಮಾಡಲ್ಪಟ್ಟಿರುತ್ತೆ.

1. ವೀರರಾಜೇಂದ್ರಪೇಟೆ ಪಟ್ಟಣಕ್ಕೆ ಸುಂಕದ ಬಾಬತು ಯಾವ ಪದಾರ್ಥಗಳನ್ನಾಗಲಿ ಪ್ಯಾಸ್ ಚೀಟಿ ಯಿಲ್ಲದೆ ಅಥವಾ ಅಂತಾ ಪದಾರ್ಥಗಳ ಮೇಲೆ ವಸೂಲಾಗತಕ್ಕ ಸುಂಕವನ್ನು ಪಾವತೀ ಮಾಡದೇ ಯಾವನು ಆಮದ್ ಮಾಡುತ್ತಾನೋ ಯಾ ಆವ್ದ್ ಮಾಡಲಿಕ್ಕೆ ಯತ್ನಿಸುತ್ತಾನೋ ಯಾ ತರುತ್ತಾನೋ ಅಂತಾ ಮನುಷ್ಯನು ಪೊಬ್ಬ ಮಾಜಿಸ್ಟ್ರೇಟರಮುಂದೆ ತಪ್ಪು ಸ್ಥಾಪಿಸಲ್ಪಟ್ಟಮೇಲೆ ಅಂತಾ ಪದಾರ್ಥಗಳ ಕಿಮ್ಮತ್ತಿನ್ನೈದಷ್ಟಕ್ಕೆ ಮೀರದ, ಮತ್ತಿನ್ಯಾವ ಸಂಗತಿಯಲ್ಲಿಯೂ 500 ರೂಪಾಯಿಗೆ ಮೀರದ ಪೊಂದು ಜುರ್ಮಾನೆಗೆ ಗುರಿಯಾಗತಕ್ಕದ್ದು. ಮತ್ತು ಸದರೀ ಪದಾರ್ಥಗಳು ಜಪ್ತಿ ಆಗಲಿಕ್ಕೆ ಸಹಾ ಗುರಿಯಾಗಿರತಕ್ಕದ್ದು.

2. ಸದರೀ ಮ್ಯುನಿಸಿಪಾಲಿಟಿಯೊಳಗೆ ಛೇದಿಸುವದಕ್ಕೊಸ್ಕರ ತರಲ್ಪಡುವ ಪ್ರತಿ ಕುರಿ ಯಾ ಮೇಕೆಗೆ 3 ಕಾಸುಗಳ ಪ್ರಕಾರ ಸುಂಕ ಕಟ್ಟಲ್ಪಡತಕ್ಕದ್ದು.

"ಬವೋಜೀಬ್ ಹುಕ್ಕುಂ,"

T. CLARKE,
Offg. Secretary.